ಲಿಪಿಕ ತನ್ನ ಇತಿಹಾಸದಲ್ಲಿ ಈ ವಿವರವನ್ನು ದಾಖಲಿಸಲು ಮರೆತ. ಆದರೆ ಇದಕ್ಕೆಲ್ಲ ಸೆಡ್ಡು ಹೊಡೆದು ಆಗಿನಕಾಲದ ವೈದ್ಯವಂಶದ (ಈಗಲ್ಲ) ಸೌಧವೊಂದು ಸಾಕ್ಷ್ಯ ಹೇಳುವಂತೆ ಸದ್ದಿಲ್ಲದೆ ಈಗೂ ನಿಂತಿದೆ...'

ಮುಂದುವರಿದಿತ್ತು ಲೇಖನ. ಇದು ವಂಶದವರ ಖಾಸಗಿ ಆಸ್ತಿ. ಪ್ರಚಾರ ಬಯಸದೆ ಇರುವುದು ವಂಶಸ್ಥರ ಹಿರಿಮೆ! ಅಂತ ಮುಗಿಸಿದ್ದ. ಮಾತಾಡಿದಂತೆ ಒಳಗಿನದನ್ನೆಲ್ಲ ಹೇಳದಿದ್ದರು, ಅಗತ್ಯಕ್ಕಿಂತ ಸ್ವಲ್ಪ ಜಾಸ್ತಿಯೆ ಆಯಿತೇನೊ ಅನಿಸಿತು ಆನಂದನಿಗೆ.

ಕಮಲಮ್ಮನಿಗೆ ಸಣ್ಣ ಆತಂಕವಾಗುತ್ತಿತ್ತು. ಒಮ್ಮೆ ಕೇಳಿದರು: 'ಅಲ್ಲ ಕಣೆ, ನೀನು ಅವರ ಜೊತೆ ತಿರುಗಾಡಕ್ಕೆ ಹೊರಟು ಬಿಡ್ತೀಯ. ಮನೆಯವ್ರು ಅಷ್ಟು ದೊಡ್ಡೋರಾದ್ರು ನಮ್ಮನ್ನ ಚೆನ್ನಾಗಿ ನಡೆಸಿಕೊಳ್ತಿದಾರೆ...'

'ಯಾಕಮ್ಮ ಏನಾಯ್ತು? ಅಪರೂಪಕ್ಕೆ ನನ್ನ ಹತ್ತಿರ ಬೌದ್ಧಿಕವಾಗಿ ಮಾತನಾಡೊ, ಗೌರವಿಸೊ ಒಬ್ರು ಸಿಕ್ಕಿದಾರೆ. ಅದಕ್ಕು ಅಸಹನೆಯ?' ಅಸಮಾಧಾನ ಹೊರಹಾಕಿದಳು.

'ಅದಲ್ಲ ಮದನಾ, ಅವ್ರು ಅಷ್ಟು ಗೌರವಸ್ಥ ಜನ...'

'ಅಂದ್ರೇನಮ್ಮ? ನಮ್ಮಲ್ಲಿ ಅಂತಾ ಕೊಳಕಿದೆಯ!... ಅವರ ಜೊತೆ ಹೋದಾಕ್ಷಣ ಗೌರವ ನಷ್ಟ ಆಗೋವಂತದ್ದು?' ಸಿಡುಕಿದಳು.

ಮಲಗೋ ಕೋಣೆಯಲ್ಲಿ ಹೋಗಿ ಕುಳಿತವಳಿಗೆ ಮನಸ್ಸು ಸಪ್ಪಗಾಗಿತ್ತು. ತಾನು ಅಭಿನಯಿಸುವ ಸಂದರ್ಭದಲ್ಲಿ ಸಹನಟರನ್ನು ಅಪ್ಪಿಕೊಳ್ಳುವಾಗ, ಅವರೊಂದಿಗೆ ಪ್ರೇಮಾಲಾಪ ಮಾಡುವಾಗ ಏನೂ ಅನಿಸದಿದ್ದ ಅಮ್ಮನಿಗೆ, ಬೇಸರ ಕಳೆಯಲು ಆನಂದನ ಜೊತೆ ಹೊರಗೆ ತಿರುಗಾಡಿದರೆ ಭಯವೇಕೆ ಅನಿಸಿತು. ಅಭಿನಯ ಅಂದಾಕ್ಷಣ ನಿನ್ನೆ ಸಂಜೆಯ ನೆನಪು ಬಂತು. ಅತಿ ಕಡಿಮೆ ಬಟ್ಟೆಯ ಆ ಕಾಸ್ಟ್ಯೂಮ್‌ನಲ್ಲಿ ತಾನಿದ್ದೆ. ಆನಂದ ಅಲ್ಲಿ ನಿಂತು ನೋಡುತ್ತಿರುವುದು ಅರಿವಾದಾಗ ಯಾಕೋ ಸಂಕೋಚವೆನಿಸಿದ್ದು ಸುಳ್ಳಲ್ಲ. ಯಾಕೆ ಹಾಗಾಯ್ತು? ನಂತರ ನೋಡಿದರೆ ಅವರು ಹೊರಟುಹೋಗಿದ್ದರು. ಸಿಟ್ಟು ಬಂದಿರಬಹುದೆ? ತಾನು ನಟಿ ಅನ್ನುವುದು ಗೊತ್ತವರಿಗೆ. ಹಾಗಿರುವಾಗ ಸಿಟ್ಟೇಕೆ? ಅವರು ಸಿಟ್ಟಾದರು ಅನ್ನುವ ಅನಿಸಿಕೆ ತನ್ನೊಳಗೆ ಸಣ್ಣ ಸುಖಕ್ಕೆ ಕಾರಣವಾಗುತ್ತಿದೆ ಅನಿಸಿತು. ಛೇ! ಏನೇನೆಲ್ಲ ವಿಚಿತ್ರ ವಿಚಾರ ಬರುತ್ತಿದೆ... ಈ ಅಮ್ಮ ಇವತ್ತು ಆಡಿದ ಮಾತೇ ಕಾರಣವಿರಬಹುದು ಅನಿಸಿ ತಲೆ ಕೊಡವಿದಳು. ಎದ್ದು ಹೊರಗೆ ಅಂಗಳಕ್ಕಿಳಿದು ಮರಗಳ ನಡುವೆ ಓಡಾಡುವಾಗ ಹಿತವೆನಿಸಿತು.

'ಏನು ಮರಗಳ ಸರ್ವೆ ಮಾಡತಾ ಇದ್ದಾಗಿದೆ!...' ಸ್ವರ ಬಂದತ್ತ ನೋಡಿದರೆ ಆನಂದ ಗದ್ದೆಗೆ ಹೋಗುವ ಕಾಲು ಹಾದಿಯಲ್ಲಿ ನಿಂತಿದ್ದ. 'ಯಾಕೋ ಬೇಸರವಾಗುತ್ತಿತ್ತು' ಅಂದವಳಿಗೆ ತಾನು ಹಾಗೆ ಹೇಳಬಾರದಿತ್ತು ಅನಿಸಿತು.

'ನಾನು ಗದ್ದೆಗೆ ಹೋಗತಿದೇನೆ, ಬರತೀಯ?'

ಅಮ್ಮ ಕೇಳಿದ್ದು ನೆನಪಾಗಿ '...ನೀವು ಹೋಗಿಬನ್ನಿ' ಅಂದಳು. ಆನಂದ ಸರಿ ಅನ್ನುವಂತೆ ತಲೆಯಾಡಿಸಿ ಹೆಜ್ಜೆ ಹಾಕಿದ. ಮರುಕ್ಷಣ, ಆ ದಾರಿಯಲ್ಲಿ ನಡೆದಾಡುವ ಆಹ್ಲಾದದ ಸೆಳೆತ ಮೇಲುಗೈ ಸಾಧಿಸಿ, ಹೋಗಿಬಿಡಲಾ ಬೇಡವಾ ಅನ್ನುವ ಸಂದಿಗ್ಧತೆಯನ್ನನುಭವಿಸಿದವಳು 'ಬರ್ತೀನಿ...' ಅನ್ನುತ್ತ ಅತ್ತ ಕಾಲು ಹಾಕಿದಳು. ಕಾಲುಹಾದಿಯಲ್ಲಿ ಹತ್ತುಮಾರು ಹೋದ ಮೇಲೆ 'ನಾನು ನಿಮ್ಜೊತೆ ಬರೋದ್ರಿಂದ ನಿಮಗೆ ತೊಂದರೆಯೇನಾದರು ಆಗುತ್ತಾ?' ಕೇಳಿದಳು. ಅವನಿಗೆ ಅರ್ಥವಾಗಲಿಲ್ಲ. 'ನನಗೇನು ತೊಂದರೆ? ನೀನೊಬ್ಳು! ನಾನೇನು ನಿನ್ನ ಹೊತ್ತುಕೊಂಡು ಕರೆದೊಯ್ಯುತ್ತೇನ?' ಅಂತ ನಕ್ಕ. ಇದ್ದಕ್ಕಿದ್ದಂತೆ ನಿರಾಳವೆನಿಸಿ ಅವಳೂ ನಕ್ಕಳು.

ಒಣಗತೊಡಗಿದ ಕರಡದ ಹುಲ್ಲಿನ ವಾಸನೆ ಗಾಳಿಯ ಜೊತೆ ಮೂಗಿಗಡರುತ್ತಿತ್ತು. ಒಂದು ಕಡೆ ಸಣ್ಣ ಬಯಲು ಏರ್ಪಟ್ಟಿದ್ದು ಕಂಡು ಅಲ್ಲಿ ಹೋಗಿ ಪರೀಕ್ಷಿಸಿ ಬಂದ ಆನಂದ ಚಂದನಿಕಾಳ ಮುಖದ ಮೇಲಿನ ಪ್ರಶ್ನೆ ಕಂಡು 'ಯಾರೋ ಕದ್ದು ಕರಡ ಸವರಿಕೊಂಡು ಹೋಗಿದಾರೆ. ಮನೆಗೆ ಹೊದೆಸಲಿಕ್ಕೊ, ಕೊಟ್ಟಿಗೆಯಲ್ಲಿ ಹಾಸಲಿಕ್ಕೊ ಇರತದೆ. ನಮ್ಮದಾಗಿರಲಿಲ್ಲ ಅಂತ ಸ್ವೀಕರಿಸಿಬಿಡೋದು ಇಂತ ಚಿಕ್ಕಪುಟ್ಟದ್ದನ್ನ' ಅಂತ ನಕ್ಕ. ನೆಲ್ಲಿಗಿಡದಲ್ಲಿ ಕಾಯಿಗಳು ಮೊದಲಿಗಿಂತ ಬಲಿತಿದ್ದವು. ಬೇಕಾ ಅಂತ ಕೇಳಿದ. ಅವಳು ಒಗರಿರಬಹುದು ಅಂತ ಸಂದೇಹ ವ್ಯಕ್ತಪಡಿಸಿದ್ದಕ್ಕೆ ಆವತ್ತಿನಷ್ಟಿರುವುದಿಲ್ಲ ಅಂದವ ಹೋಗಿ ನಾಕಾರು ಕಿತ್ತು ತಂದ. ನಿಜಕ್ಕು ಅಷ್ಟು ಒಗರಾಗಿರಲಿಲ್ಲ. ಆದರೆ ಇನ್ನೂ ಬಲಿಯಬೇಕು ಅನ್ನೋದು ಗೊತ್ತಾಗುತ್ತಿತ್ತು. ತನ್ನಮ್ಮ ಮಾಡುವ ನೆಲ್ಲಿಕಾಯಿ ಉಪ್ಪಿನಕಾಯಿಯ ಸುದ್ದಿ ಹೇಳಿದ. ಅವಳ ಬಾಯಲ್ಲಿ ನೀರು ಬಂತು. ಹೊಳೆಯಲ್ಲಿ ನೀರು ಕಮ್ಮಿಯಾಗಿರಲಿಲ್ಲ, ಆದರೆ ಹಣಿತಿತ್ತು. ಅವಳಿವತ್ತು ಚೂಡಿದಾರದಲ್ಲಿದ್ದಳು. ಒಂದು ಕೈಯನ್ನು ಅವನ ಕೈಯಲ್ಲಿಟ್ಟು ದಾಟಿದಳು. ಪ್ಯಾಂಟು ಒದ್ದೆಯಾಯಿತು. ಏನೂ ಮಾಡುವಹಾಗಿರಲಿಲ್ಲ. 'ನಿನ್ನ ಸಿನಿಮಾದಲ್ಲಾಗಿದ್ದರೆ ಹೀರೋ ಮಡಿಲಲ್ಲೆತ್ತಿಕೊಂಡು ದಾಟಿಸುತ್ತಿದ್ದ. ಅಲ್ಲವಾ?' ವಿನೋದದ ದನಿಯಲ್ಲಿ ಕೇಳಿದ. ಹುರುಪು ಬಂದು 'ಅಷ್ಟೇ ಅಲ್ಲ. ಜಾರಿ ಇಬ್ಬರೂ ನೀರಲ್ಲಿ ಬೀಳುವ ಸೀನೂ ಇರ್ತಿತ್ತು' ನಗುತ್ತ ಅಂದಳು. ಅವಳೆದೆ ಕಾರಣವಿಲ್ಲದೆ ಡಬ್‌ಡಬ್ ಅಂದಿತು.

ಗದ್ದೆಯಲ್ಲಿ ಬತ್ತ ಒಣಗಿ, ಗಾಳಿಗೆ ಹೊಂಬಣ್ಣದ ಅಲೆಗಳು ಏರಿಳಿಯುತ್ತಿದ್ದವು. ಗದ್ದೆಯನ್ನೆಲ್ಲ ಕಣ್ಣಲ್ಲಿ ಅಳೆಯುತ್ತಾ 'ಬತ್ತ ಕೊಯ್ಯುವ ಕೆಲಸ ಶುರುಮಾಡಬೇಕು. ಹದಿನೈದು ದಿವಸಕ್ಕೆ ಅಡಕೆ ಕೊಯ್ಲೂ ಶುರು ಮಾಡಬೇಕಾಗತದೆ ಈ ಸಲ' ಅಂದ ತನಗೆ ತಾನೇ ಹೇಳಿಕೊಳ್ಳುವಂತೆ.

'ಅಡಕೆ ಸುಲಿಯೋದೆಲ್ಲ ಯಾರು?'

'ಮೊದಲಾದರೆ ಮನೆಯಂಗಳದಲ್ಲೆ ಹತ್ತಾರು ಜನ ಕುಳಿತು ಸುದ್ದಿ ಹೇಳುತ್ತ ನಡುರಾತ್ರಿವರೆಗೂ ಸುಲೀತಿದ್ದರು. ಈಗ ಜನ ಸಿಗೋದಿಲ್ಲ. ಮಷೀನಿಗೆ ತಗೊಂಡು ಹೋಗಿ ಸುಲಿಸಿಕೊಂಡು ಬರುತ್ತೇವೆ. ಈಗ ಧಾವಂತದ ಯುಗ. ಎಲ್ಲಾ ಕೆಲಸ ಬೇಗ ಬೇಗ ಆಗಬೇಕೂ; ಆಮೇಲೆ ನಮಗೆ ಜಾತ್ರೆ ತಿರುಗಬೇಕೂ...' ಕೊನೆಯ ಸಾಲನ್ನು ಹಾಡಿನಂತೆ ಎಳೆದು ಅಣಕಿಸಿದ.

'ದೇಶದಲ್ಲಿ ನಿರುದ್ಯೋಗವಿದೆ ಅಂತಾರೆ. ಜನಸಂಖ್ಯೆನೂ ಏರತಿದೆ ಅಂತ ವರದಿ ನೋಡತೀವಿ. ಕೆಲಸಕ್ಕೆ ಜನ ಸಿಗಲ್ಲ ಅಂತಾನೂ ಎಲ್ಲ ಆರೋಪಿಸ್ತಾರೆ...' ಅಚ್ಚರಿಯಿಂದ ಕಣ್ಣರಳಿಸಿದಳು.

'ಶಹರಕ್ಕೆ ವಲಸೆ ಅಂತ ನನ್ನಭಿಪ್ರಾಯ. ನಿಂಗೊತ್ತಾ? ಊರಲ್ಲಿ ಕೃಷಿ ಮಾಡಿಕೊಂಡಿರೋ ಅನುಕೂಲಸ್ಥರಿಗು ಈಗ ಹುಡುಗೀರು ಮುಖ ಅಡ್ಡಡ್ಡ ಆಡಿಸ್ತಾರೆ. ಶಹರದಲ್ಲಿ ಇದಾನೆ ಅಂತಾದರೆ ಸಂತಸದಿಂದ ಮೇಲೆಕೆಳಗೆ ಆಡಿಸತಾರೆ. ನಂಗೂ ಅದೇ ಗತಿಯೆ!' ಮಿನುಗುವ ಕಣ್ಣುಗಳಲ್ಲಿ ವಿನೋದವಿತ್ತು. 'ಬ್ರಹ್ಮಚಾರಿಯಾಗಿದ್ಬಿಡೋದಪ, ಏನು ತಪ್ಪು?' ತುಟಿ ಕೊಂಕಿಸಿ ನಕ್ಕಳು. ಅವನೂ ನಕ್ಕ.

ಮರಳಿ ಬರುವಾಗ ನೀರಿನ ತಂಪನ್ನು ಕಂಡು ಸ್ವಲ್ಪ ಹೊತ್ತು ಕುಳಿತಿರುವ ಆಸೆಯಾಯಿತು ಚಂದನಿಕಾಳಿಗೆ. ನೀರಂಚಿಗೆ ತಾಗಿರುವ ಕಲ್ಲುಗಳಮೇಲೆ ಸಾವರಿಸಿಕೊಂಡು ಕುಳಿತರು. ಮೊಳಕಾಲವರೆಗೆ ಸಳಸಳನೆ ತೀಡುತ್ತ ಧಾವಿಸುವ ನೀರ ತಂಪು ಅಂಗಾಲಿಂದ ನೆತ್ತಿಯವರೆಗು ಏರುತ್ತಿರುವ ಅನುಭವವಾಗುತ್ತಿತ್ತು. 'ಚಂದನಿಕಾ, ನಿಂಗೆ ಸಿನಿಮಾ ನಾಯಕಿ ಪಾತ್ರ ಸಿಗೋದು ನಿಶ್ಚಯವಾಗಿದೆಯಂತೆ?...'

'ಯಾಕೆ ಕೇಳಿದ್ರಿ ಆನಂದ್?' ಅವಳ ದನಿಯಲ್ಲಿ ಸಂಭ್ರಮ ಕಾಣಲಿಲ್ಲ.

'ನಿಮ್ಮಮ್ಮ ಯಾರ ಹತ್ತಿರಾನೊ ಹೇಳೋದು ಕೇಳಿಸಿತು...'

ಅವಳಿಗೆ ಏನು ಹೇಳಬೇಕು ಹೊಳೆಯಲಿಲ್ಲ. ಸುಪ್ತ ಆಸೆಯ ಮಾರ್ಗದರ್ಶಿಯಾಗಿ ಹಲವು ಹೇಳಬಹುದಾದ ಮಾತುಗಳು ಸೂಚಿಸುತ್ತಿದ್ದವು. ಆದರೆ ಮನದಾಳದಲ್ಲಿ ಗೊಂದಲವಿತ್ತು. ಅವನಿಗೆ ಉತ್ತರಿಸಲೇಬೇಕಿತ್ತು. ದಿಕ್ಸೂಚಿಯಾಗಬಹುದಾದ ಮಾತೊಂದು ಹೊಳೆಯಿತು: 'ನಂಗೆ ನಟಿಯಾಗೋ ಮಹತ್ವಾಕಾಂಕ್ಷೆಯಿಲ್ಲ. ಬೇರೆ ಕೆಲಸವಿಲ್ಲದ್ದಕ್ಕೆ ಇಲ್ಲಿದೀನಿ. ಅಲ್ಲಿವರೆಗೆ ಸಾಧ್ಯವಾದರೆ ಧಾರಾವಾಹಿಗಳಲ್ಲಿರತೀನಿ.'

ಅವಳೀ ಕ್ಷೇತ್ರವನ್ನು ಬೆನ್ನುಹತ್ತಿ ಬಂದಿಲ್ಲ ಅನ್ನುವುದು ಅರ್ಥವಾಯಿತು ಅವನಿಗೆ. ಅವಳತ್ತ ನೋಡಿದ. ಶಾಲೆಯ ಹುಡುಗಿಯಂತೆ ಸ್ವಚ್ಛಂದವಾಗಿ ನೀರಲ್ಲಿ ಕಾಲು ಬಡಿಯುತ್ತ ಏಳುವ ಅಲೆಯನ್ನು ನೋಡುವುದರಲ್ಲಿ ಮಗ್ನವಾಗಿದ್ದಳು. ಅದನ್ನು ತದೇಕಚಿತ್ತದಿಂದ ನೋಡುತ್ತಿದ್ದ ಅವನ ಮನಸು ಸುಂದರವಾಗಿದಾಳೆ ಅಂದಿತು. ನೀರಲ್ಲಿ ಯಾಂತ್ರಿಕವಾಗಿ ಕಾಲಾಡಿಸುತ್ತಿದ್ದವಳ ಮನದಲ್ಲಿ ಈಗಷ್ಟೇ ಆನಂದನಿಗೆ ಸಶಬ್ದವಾಗಿ ಹೇಳಿದ ವಾಕ್ಯದ ಮುಂದಿನ ಭಾಗ ಮೌನದಲ್ಲಿ ಮುಂದುವರಿದಿತ್ತು. ಬಿಸಿಲು ಕಸುವು ಕಳೆದುಕೊಂಡಿರದಿದ್ದರೂ ತೇವಾಂಶ ಕಳೆದುಕೊಳ್ಳುತ್ತಿರುವ ಗಾಳಿಯಲ್ಲಿ ಚಳಿಗಾಲಕ್ಕೆ ಆಹ್ವಾನವಿತ್ತು. ನಿರಭ್ರ ಆಕಾಶ ನೀಲಿ ನೀಲಿಯಾಗಿ ಹರಡಿಕೊಂಡಿತ್ತು. ಮಧ್ಯಾಹ್ನವಾಗುತ್ತಿದೆ ಅಂತ ಅವಳನ್ನೆಬ್ಬಿಸಿದ.

**(ಸಶೇಷ)**